# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: | 720 |
| ಸದಸ್ಯರ ಹೆಸರು | :: | ಶ್ರೀ ವೈ.ಎಂ. ಸತೀಶ್(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | :: | 12.07.2023 |
| ಉತ್ತರಿಸುವ ಸಚಿವರು | :: | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೂಡ್ಲಗಿ ತಾಲ್ಲೂಕು, ಕೂಡ್ಲಿಗಿ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಬಳಕೆಯಲ್ಲಿದ್ದ ಆಟದ ಮೈದಾನವನ್ನು ಖಾಸಗಿ ವ್ಯಕ್ತಿ ತಮಗೆ ಸೇರಿದೆಂದು ನಿವೇಶನಗಳನ್ನು ಮಾಡಿ ಮಾರಾಟ ಮಾಡಿರುವುದು ನಿಜವೇ; (ಈ ಕುರಿತು ಪೂರ್ಣ ಮಾಹಿತಿ ನೀಡುವುದು) | ವಿಜಯನಗರ ಜಿಲ್ಲೆ, ಕೂಡ್ಲಿಗಿ ಗ್ರಾಮದ ಸ.ನಂ. 693/ಸಿ ರಲ್ಲಿ ವಿಸ್ತೀರ್ಣ 3.88 ಎಕರೆ ಜಮೀನು ಹೆಚ್.ಸುನಂದ ಕೋಂ ಲೇಟ್ ರಾಘವೇಂದ್ರರಾವ್ ಇವರ ಹೆಸರಿಗೆ ಇದ್ದು ಖಾಸಗಿ ಜಮೀನಾಗಿದ್ದು, ಭೂ ಪರಿವರ್ತನೆಯಾದ ಜಮೀನಾಗಿರುತ್ತದೆ.<br><br>ಸದರಿ ಜಮೀನಿಗೆ ಸಂಬಂಧಿಸಿದಂತೆ, ಮಾನ್ಯ ಉಚ್ಚ ನ್ಯಾಯಾಲಯ, ಧಾರವಾಡ ಇವರ ಆದೇಶ ಸಂಖ್ಯೆ: W.P.No.100115/2023 (GM-RES) ದಿನಾಂಕ:30.01.2023ರ ಆದೇಶದಲ್ಲಿ ಪ್ರಸ್ತಾಪಿತ ಜಮೀನಿನ ಸುತ್ತಲೂ ನಿರ್ಮಿಸಿರುವ ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸುವ ಕುರಿತು ನಿಯಮಾನುಸಾರ ಪರಿಶೀಲಿಸಿ ಕಾನೂನು ಅಡಿಯಲ್ಲಿ ಸೂಕ್ತ ಕ್ರಮವಹಿಸಲು ಸೂಚಿಸಿದಂತೆ ದಿನಾಂಕ:29.05.2023 ರಂತೆ ವಿಚಾರಣೆಗಾಗಿ ಈ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳಿಗೆ ನೋಟಿಸ್ ನೀಡಿ ವಿಚಾರಣೆ ಕೈಗೊಳ್ಳಲಾಯಿತು.<br><br>ಈ ಪ್ರಕರಣದಲ್ಲಿ ಕೂಡ್ಲಿಗಿ ಪಟ್ಟಣದ ಸರ್ಕಾರಿ ಕಾಲೇಜು/ಶಾಲೆಯ ಹೆಸರಿನಲ್ಲಿ ಸದರಿ ಜಮೀನನ್ನು ಪಹಣಿ ನಮೂದಾಗಲಿ/ಬೇರೆ ಇನ್ನಿತರ ದಾಖಲೆಗಳು ಕಂಡು ಬಂದಿರುವುದಿಲ್ಲ. ಪ್ರಸ್ತಾಪಿತ ಭೂ ಪರಿವರ್ತನೆಯಾದ ಜಮೀನಿನಲ್ಲಿ 19 ನಿವೇಶನಗಳನ್ನು ಮಾರಾಟ ಮಾಡಿರುತ್ತೇವೆಂದು ವಿಚಾರಣೆ ವೇಳೆಯಲ್ಲಿ ಪ್ರತಿವಾದಿಗಳು ತಿಳಿಸಿರುತ್ತಾರೆ. |
| ಆ) | ಕೂಡ್ಲಗಿ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಬಳಕೆಯಲ್ಲಿದ್ದ ಆಟದ ಮೈದಾನದ ಕುರಿತು ಜಿಲ್ಲಾಧಿಕಾರಿಗಳು ವರದಿ ನೀಡಲು ತಹಶೀಲ್ದಾರ್ ರವರಿಗೆ | ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, ತಹಶೀಲ್ದಾರರು, ಕೂಡ್ಲಿಗಿ ಇವರು ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರದಲ್ಲಿ ಸದರಿ ಜಮೀನು ಪಟ್ಟಾ ಜಮೀನಾಗಿದ್ದು, ಭೂ ಪರಿವರ್ತನೆಯಾದ |

| | | |
|---|---|---|
| | ಸೂಚಿಸಿರುವುದು ಈ ಕುರಿತು ಆಗಿರುವ ಪ್ರಗತಿಯ ವಿವರಗಳನ್ನು ನೀಡುವುದು; | ಜಮೀನಾಗಿದ್ದು, ಭೂ ಪರಿವರ್ತನೆ ಆದೇಶದಂತೆ ಅಭಿವೃದ್ಧಿ ಕೈಗೊಳ್ಳದೇ ಇರುವುದು ಕಂಡು ಬಂದಿರುತ್ತದೆ. ಪ್ರಯುಕ್ತ ಪ್ರಸ್ತಾಪಿತ ಜಮೀನಿನ ಭೂ ಪರಿವರ್ತನೆ ಆದೇಶವನ್ನು ರದ್ದುಗೊಳಿಸಬೇಕೆಂದು ವರದಿಯನ್ನು ಸಲ್ಲಿಸಿರುತ್ತಾರೆ.<br><br>ಅಲ್ಲದೇ, ಮಾನ್ಯ ಉಚ್ಚ ನ್ಯಾಯಾಲಯ ಧಾರವಾಡ ಇವರ W.P.No.100115/2023 (GM-RES) ದಿನಾಂಕ:30.01.2023ರ ಆದೇಶದಂತೆ ನಿಯಮಾನುಸಾರ ಪರಿಶೀಲಿಸಲು ದಿನಾಂಕ:29.05.2023 ರಂದು ಮಾನ್ಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಕೈಗೊಂಡು ಅಂತಿಮ ಆದೇಶಕ್ಕೆ ಕಾಯ್ದಿರಿಸಲಾಗಿರುತ್ತದೆ. |

**ಆರ್‌ಡಿ 30 ಎಲ್‌ಜಿಇ 2023**

**(ಕೃಷ್ಣ ಬೈರೇಗೌಡ)**

**ಕಂದಾಯ ಸಚಿವರು**